ಅಸಲು ದಾವಾ ತೀರ್ಪಿನ ಶೀರ್ಷಿಕೆ ಪುಟ

ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ

ಉಪಸ್ಥಿತರುಃ- ಶ್ರೀ.ವೈ.ಕೆ.ಬೇನಾಳ, ಬಿ.ಎ. ಎಲ್ಎಲ್‌ಬಿ, (ಆನರ್ಸ್),
ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಹರಪನಹಳ್ಳಿ.

ದಿನಾಂಕ ಃ ೧೬.೦೬.೨೦೧೬

ಅಸಲು ದಾವಾ ಸಂಖ್ಯೆಃ ೨೦೩/೨೦೧೫

ವಾದಿಗಳುಃ-

೧. ಶ್ರೀ.ಕೆ.ಅಸ್ಲಂಬಾಷ ತಂದೆ ಲೇಟ್ ಇಮಾಮ್ ಸಾಹೇಬ್
ವಯಸ್ಸುಃ ೫೦ ವರ್ಷ ಉಃ ವಕೀಲರು ಮತ್ತು ವ್ಯವಹಾರ
ವಾಸಃ ಮನೆ ನಂಃ೭೦೪, ವಾರ್ಡ್ ನಂಃ೧೦ ಹರಪನಹಳ್ಳಿ,
ದಾವಣಗೆರೆ ಜಿಲ್ಲೆ.

೨. ಶ್ರೀಮತಿ ಕೆ. ಪರ್‌ವಿನ್ ಬಾನು ಗಂಡ ಡಾಃಕೆ.ಎಂ.ಎನ್.ಖಾನ್
ವಯಸ್ಸು ಃ ೪೭ ವರ್ಷ ಉಃ ಗೃಹಿಣಿ
ವಾಸ ಃ ೧೨ ನೇ ವಾರ್ಡ್ ಹಡಗಲಿ ರಸ್ತೆ ಹರಪನಹಳ್ಳಿ,
ದಾವಣಗೆರೆ ಜಿಲ್ಲೆ.

(ವಾದಿಯರ ಪರ ವಕೀಲರುಃ ಶ್ರಿ.ಕೆ. ಬಸವರಾಜ್)

// ವಿರುದ್ಧ //

ಪ್ರತಿವಾದಿಗಳುಃ-

೧. ಶ್ರೀ.ಕೆ. ಮಕ್ಕಬುಲ್ ತಂದೆ ಬಾಷಸಾಹೇಬ್

ವಯಸ್ಸು: ೫೨ ವರ್ಷ, ಉ: ವ್ಯವಹಾರ
ವಾಸ: ಮನೆ ನಂ:೧೭೪/೨೦೮/೧೭೪ ೨ನೇ ವಾರ್ಡ್ ಬನಗೇರಿ ಹರಪನಹಳ್ಳಿ. ದಾವಣಗೆರೆ ಜಿಲ್ಲೆ.

೨. ಶ್ರೀ ಮುಕ್ಕತೀಯಾರ್ ತಂದೆ ಬಾಷ ಸಾಹೇಬ್
ವಯಸ್ಸು : ೪೮ ವರ್ಷ ಉ: ಪ್ರಥಮ ದರ್ಜೆ ಗುತ್ತಿಗೆದಾರ
ವಾಸ : ಮನೆ ನಂ:೧೭೪/೨೦೮/೧೭೪
೨ನೇ ವಾರ್ಡ್ ಬನಗೇರಿ ಹರಪನಹಳ್ಳಿ, ದಾವಣಗೆರೆ ಜಿಲ್ಲೆ.

(ಪ್ರತಿವಾದಿಗಳ ಪರ ಶ್ರೀ ಶಾಂತಮೂರ್ತಿ ಎನ್ ವಕೀಲರು)

| | | |
|---|---|---|
| ದಾವೆ ದಾಖಲು ಮಾಡಿದ ದಿನಾಂಕ | : | ೨೨.೦೯.೨೦೧೫ |
| ದಾವೆಯ ಸ್ವರೂಪ | : | ಕರಾರಿನ ನಿರ್ದಿಷ್ಟ ಅನುಷ್ಠಾನವನ್ನು ಕೋರಿ ಹಾಗೂ ದಾವಾ ಆಸ್ತಿಯ ಸ್ವಾಧೀನತೆಯನ್ನು ಪ್ರತಿವಾದಿಗಳಿಂದ ಕೊಡಿಸಬೇಕೆಂದು ಕೋರಿ ಸಲ್ಲಿಸಿದ ದಾವೆ. |
| ಸಾಕ್ಷಿ ದಾಖಲು ಮಾಡಲು ಪ್ರಾರಂಭಿಸಿದ ದಿನಾಂಕ | : | ೦೫-೦೩-೨೦೧೬ |
| ತೀರ್ಪು ಘೋಷಣೆ ಮಾಡಿದ ದಿನಾಂಕ | : | ೧೬.೦೬.೨೦೧೬ |
| ಒಟ್ಟು ಕಾಲಾವಧಿ | | ವರ್ಷ/ಗಳ ತಿಂಗಳು/ಗಳು ದಿನ/ಗಳು |
| | | ೦೦ ೮ ೨೪ |

ಸಿವಿಲ್ ನ್ಯಾಯಧೀಶರು ಮತ್ತು ಜೆಎಂಎಫ್‌ಸಿ,
ಹರಪನಹಳ್ಳಿ

## ಮೂಲದಾವೆ ನಂ.೨೦೩/೨೦೧೫

### ತೀರ್ಪು

ವಾದಿಗಳು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಮನೆಗೆ ಸಂಬಂಧಿಸಿದಂತೆ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಬೇಕೆಂದು ಹಾಗೂ ದಾವಾ ಆಸ್ತಿಯ ಸ್ವಾಧೀನತೆಯನ್ನು ಪ್ರತಿವಾದಿಗಳಿಂದ ಕೊಡಿಸಬೇಕೆಂದು ಕರಾರಿನ ನಿರ್ದಿಷ್ಟ ಅನುಷ್ಠಾನವನ್ನು ಕೋರಿರುತ್ತಾರೆ.

೨. ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಕೆಳಕಂಡೆ ಇದೆ.

ಪ್ರತಿವಾದಿಗಳು ದಾವಾ ಮನೆ ನಂ.೧೭೪/೨೦೮/೧೭೪ ವಿಸ್ತೀರ್ಣ ೨೧X೩೫ ಅಡಿಗೆ ಮಾಲೀಕರು ಹಾಗೂ ಸ್ವಾಧೀನದಾರರು. ಪ್ರತಿವಾದಿಗಳು ದಾವಾ ಆಸ್ತಿಯನ್ನು ೨ ಲಕ್ಷ ೨೫ ಸಾವಿರ ರೂಪಾಯಿಗಳಿಗೆ ವಾದಿಗಳಿಗೆ ಮಾರಾಟ ಮಾಡುವುದಾಗಿ ದಿ.೨೫.೦೨.೨೦೧೪ ರಂದು ಸಾಕ್ಷಿದಾರರ ಸಮಕ್ಷಮ ಒಪ್ಪಿ ಕರಾರಿನ ಭಾಗವಾಗಿ ಪ್ರತಿವಾದಿಗಳು ೨ ಲಕ್ಷ ರೂಪಾಯಿಗಳನ್ನು ಅದೇ ದಿನ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡು ವಾದಿಗಳ ಪರ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಮತ್ತು ಉಳಿದ ೨೫ ಸಾವಿರ ರೂಪಾಯಿಗಳನ್ನು ದಿ.೩೧.೦೫.೨೦೧೪ ರ ಒಳಗೆ ಪಡೆದುಕೊಳ್ಳುವುದಾಗಿ ಒಪ್ಪಿಕೊಂಡಿರುತ್ತಾರೆ. ವಾದಿಗಳು ಕ್ರಯದ ಕರಾರು ಪತ್ರ ಆದ ಒಂದು ತಿಂಗಳ ಒಳಗೆ

ಪ್ರತಿವಾದಿಗಳಿಗೆ ಬೇಟಿಯಾಗಿ ಉಳಿದ ೨೫ ಸಾವಿರ ರೂಪಾಯಿ ಹಣವನ್ನು ಪಡೆದುಕೊಂಡು ನೊಂದಾಯಿತ ಕ್ರಯಪತ್ರ ಬರೆದುಕೊಡಬೇಕೆಂದು ಕೇಳಿಕೊಂಡಿರುತ್ತಾರೆ ಆದರೆ ಪ್ರತಿವಾದಿಗಳು ನೊಂದಾಯಿತ ಕ್ರಯಪತ್ರ ಬರೆದುಕೊಡುವುದಕ್ಕೆ ಮುಂದೂಡುತ್ತಾ ಬಂದಿರುವುದರಿಂದ ಕೊನೆಯದಾಗಿ ವಾದಿಗಳು ದಿ.೧೭.೦೫.೨೦೧೪ ರಂದು ತಮ್ಮ ವಕೀಲರ ಮೂಲಕ ೨೫ ಸಾವಿರ ರೂಪಾಯಿಗಳ ಡಿಡಿ ಯೊಂದಿಗೆ ನೋಟಿಸ್‌ನ್ನು ಕೊಟ್ಟು ದಿ.೨೪.೦೫.೨೦೧೪ ರ ಒಳಗೆ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡಬೇಕು ಎಂದು ಹೇಳಿರುತ್ತಾರೆ. ಪ್ರತಿವಾದಿಗಳು ಸದರಿ ನೋಟಿಸ್‌ಗೆ ಸುಳ್ಳು ಉತ್ತರವನ್ನು ನೀಡಿರುತ್ತಾರೆ. ವಾದಿಗಳು ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ಸದಾ ತಯಾರಿ ಹಾಗೂ ಇಚ್ಛೆವುಳ್ಳವರಾಗಿರುತ್ತಾರೆ ಆದರೆ ಪ್ರತಿವಾದಿಗಳೇ ಮುಂದೂಡುತ್ತಾ ಬಂದಿರುತ್ತಾರೆ. ದಿ.೨೫.೦೨.೨೦೧೪ ರಂದು ಪ್ರತಿವಾದಿಗಳು ದಾವಾ ಆಸ್ತಿಯನ್ನು ವಾದಿಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ೨ ಲಕ್ಷ ರೂಪಾಯಿ ಹಣವನ್ನು ಮುಂಗಡವಾಗಿ ಪಡೆದುಕೊಂಡು ಕ್ರಯದ ಕರಾರು ಪತ್ರ ಬರೆದುಕೊಟ್ಟಾಗ ಮತ್ತು ಪ್ರತಿವಾದಿಗಳು ಉಳಿದ ೨೫ ಸಾವಿರ ರೂಪಾಯಿ ಪಡೆದು ನೊಂದಾಯಿತ ಕ್ರಯಪತ್ರ ಬರೆದುಕೊಡಲು ತಪ್ಪಿದಾಗ ದಾವಾ ಕಾರಣ ಉಂಟಾಗಿರುತ್ತದೆ ಆದ್ದರಿಂದ ದಾವೆಯಲ್ಲಿ ಕೇಳಿದಂತೆ ತಮ್ಮ ಪರ ಡಿಕ್ರಿ ಮಾಡಬೇಕೆಂದು ವಾದಿಗಳು ಪ್ರಾರ್ಥಿಸಿಕೊಂಡಿರುತ್ತಾರೆ.

೩)ಪ್ರತಿವಾದಿಗಳಿಗೆ ದಾವೆಯ ಸಮನ್ಸ್‌ನ್ನು ಕಳುಹಿಸಲಾಗಿ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದರೂ ಸಹ ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

೪) ವಾದ ಪತ್ರದಲ್ಲಿ ಆರೋಪಿಸಿರುವ ಅಂಶಗಳನ್ನು ಸಾಬಿತುಪಡಿಸಲು ೧ನೇ ವಾದಿ ತಾನು ಪಿಡಬ್ಲೂ.೧ ಎಂದು ಹಾಗೂ ಒಬ್ಬ ಸಾಕ್ಷಿದಾರನನ್ನು ಪಿಡಬ್ಲೂ.೨ ಎಂದು ವಿಚಾರಣೆಗೆ ಒಳಪಡಿಸಿಕೊಂಡು ೬ ದಾಖಲೆಗಳನ್ನು ನಿಪಿ.೧ ರಿಂದ ೬ ಎಂದು ಗುರುತಿಸಿಕೊಂಡು ತಮ್ಮ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.

೫) ವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು.

೬) ವಾದ ಪತ್ರ ಮತ್ತು ವಾದಿಗಳ ಪರ ಇರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷಿಯನ್ನು ಅವಲೋಕಿಸಲಾಗಿ ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ.

1. Whether the plaintiffs proves that the defendants have agreed to sell the suit schedule property measuring 21x35 feet for consideration of Rs.2,25,000/-and obtained an amount of Rs.2,00,000/- as a part performance of contract and executed an registered agreement to sell dated 25/2/2014?

2. Whether the plaintiffs further proves that they are always ready and willing to perform their part of the contract?

3. Whether the plaintiffs are entitled to the reliefs as sought for?

4. What Order or Decree?

೭) ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ .

ಅಂಶ ೧ : ಸಕಾರಾತ್ಮಕ

ಅಂಶ ೨ : ಸಕಾರಾತ್ಮಕ

ಅಂಶ ೩ : ಸಕಾರಾತ್ಮಕ

ಅಂಶ ೪ : ಅಂತಿಮ ಆದೇಶದಂತೆ

-:: ಕಾ ರ ಣ ಗ ಳು ::-

೮) ಅಂಶ ೧ ರಿಂದ ೩:- ಮೂರು ಅಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡು ಬಂದರೂ ಸಹ ಅಂತರಿಕವಾಗಿ ಒಂದಕ್ಕೊಂದು ಸಂಬಂಧ ಹೊಂದಿರುವ ಕಾರಣ ವಿಷಯಗಳ ಪುನರಾರ್ವತನೆ ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಗಿದೆ.

ವಾದಿಗಳು ವಾದಪತ್ರದಲ್ಲಿ ಆರೋಪಿಸಿದಂತೆ ದಾವಾ ಆಸ್ತಿಯನ್ನು ತಮಗೆ ಮಾರಾಟ ಮಾಡುವುದಾಗಿ ಪ್ರತಿವಾದಿಗಳು ಒಪ್ಪಿ ತಮ್ಮಿಂದ ಕ್ರಯದ ಕರಾರು ಮೊತ್ತ ೨,೨೫,೦೦೦ ರೂಪಾಯಿಗಳಲ್ಲಿ ಮುಂಗಡವಾಗಿ ೨,೦೦,೦೦೦

ರೂಪಾಯಿ ಹಣವನ್ನು ಪಡೆದು ದಿ.೨೫.೦೨.೨೦೧೪ ರಂದು ನೊಂದಾಯಿತ ಕ್ರಯದ ಕರಾರು ಪತ್ರವನ್ನು ತಮ್ಮ ಪರ ಬರೆದುಕೊಟ್ಟಿರುವುದನ್ನು

ಸಾಬೀತುಪಡಿಸಲು ೧ನೇ ವಾದಿ ತಾನು ಪಿಡಬ್ಲೂ.೧ ಎಂದು ವಿಚಾರಣೆಗೆ ಒಳಪಟ್ಟು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಅಂಶಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ ಅಲ್ಲದೇ ಪ್ರತಿವಾದಿಗಳು ನಿಪಿ.೧ ಕ್ರಯದ ಕರಾರುಪತ್ರಕ್ಕೆ ತನ್ನ ಸಮಕ್ಷಮ ನಿಪಿ.೧(ಎ) ಮತ್ತು (ಬಿ) ರಂತೆ ಸಹಿ ಮಾಡಿರುತ್ತಾರೆ ಎಂದು ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ ಅಲ್ಲದೇ ವಾದಿಗಳ ಪರ ಸಾಕ್ಷಿ ನುಡಿದ ಪಿಡಬ್ಲೂ.೨ ತನ್ನ ಸಾಕ್ಷಿಯಲ್ಲಿ ಪ್ರತಿವಾದಿಗಳು ದಾವಾ ಮನೆಯನ್ನು ವಾದಿಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ದಿ.೨೫.೦೨.೨೦೧೪ ರಂದು ತನ್ನ ಹಾಗೂ ಒಬ್ಬ ಹಸನ್ಮಿಯಾ ಇವರ ಸಮಕ್ಷದಲ್ಲಿ ೨ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಪಡೆದು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಮತ್ತು ನಿಪಿ.೧ ಕ್ಕೆ ತಾನು ನಿಪಿ.೧(ಡಿ) ರಂತೆ ಸಹಿ ಮಾಡಿರುವುದಾಗಿ ವಾದಿಯರ ಕೇಸಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ ಅಲ್ಲದೇ ವಾದಿಗಳು ೬ ದಾಖಲೆಗಳನ್ನು ನಿಪಿ.೧ ರಿಂದ

೬ ಎಂದು ಗುರುತಿಸಿಕೊಂಡಿರುತ್ತಾರೆ. ನಿಪಿ.೨ ಮತ್ತು ೩ ನ್ನು ಅವಲೋಕಿಸಲಾಗಿ ಅವು ಖಾತಾ ಉತಾರ ಆಗಿದ್ದು ಅವುಗಳಂತೆ ಪ್ರತಿವಾದಿಗಳು ದಾವಾ ಮನೆಯ ಮಾಲೀಕರು ಹಾಗೂ ಸ್ವಾಧೀನದಾರರು ಆಗಿರುತ್ತಾರೆ ಅಲ್ಲದೇ ನಿಪಿ.೧ ರಂತೆ ಪ್ರತಿವಾದಿಗಳು ದಿ.೨೫.೦೨.೨೦೧೪ ರಂದು ದಾವಾ ಮನೆಯನ್ನು ವಾದಿಗಳಿಗೆ ೨,೨೫,೦೦೦/- ರೂಪಾಯಿಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ೨ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಪಡೆದುಕೊಂಡು ಉಳಿದ ೨೫,೦೦೦ ರೂಪಾಯಿಗಳನ್ನು ದಿ.೩೧.೦೫.೨೦೧೪ ರ ಒಳಗಾಗಿ ಪಡೆದು ವಾದಿಗಳು ಕರೆದಾಗ ಬಂದು ನೊಂದಾಯಿತ ಕ್ರಯಪತ್ರ ಬರೆದುಕೊಡುವುದಾಗಿ ಒಪ್ಪಿ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಅಲ್ಲದೇ ನಿಪಿ.೧ ಕ್ಕೆ ಪೂರಕವಾಗಿ ಪಿಡಬ್ಲ್ಯೂ.೧ ಮತ್ತು ೨ ಸಾಕ್ಷಿ ನುಡಿದಿರುತ್ತಾರೆ ಹಾಗೂ ಪ್ರತಿವಾದಿಗಳು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿದ್ದರೂ ಸಹ ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ ಹಾಗೂ ವಾದಿಯರ ವಾದ ಪತ್ರದಲ್ಲಿನ ಅಂಶಗಳನ್ನು ಸುಳ್ಳು ಎಂದು ಅಲ್ಲಗಳೆದಿರುವುದಿಲ್ಲ ಮತ್ತು ಪಿಡಬ್ಲ್ಯೂ.೧ ಹಾಗೂ ೨ ರವರನ್ನು ಪಾಟೀ ಸವಾಲಿಗೆ ಒಳಪಡಿಸದ ಕಾರಣ ವಾದಿಗಳ ಪರ ಇರುವ ಸಾಕ್ಷಿ ಪ್ರಶ್ನಿಸದೇ ಹಾಗೇ ಉಳಿದಕೊಂಡ ಕಾರಣ ಸದರಿ ಸಾಕ್ಷಿಯನ್ನು ನಂಬದೇ ಇರಲು ಯಾವುದೇ ಸಕಾರಣಗಳು ಇರುವುದಿಲ್ಲ ಆದ್ದರಿಂದ ವಾದಿಗಳು ವಾದಪತ್ರದಲ್ಲಿ ಆರೋಪಿಸಿದಂತೆ ದಾವಾ ಮನೆಯನ್ನು ಪ್ರತಿವಾದಿಗಳು ಮಾರಾಟ ಮಾಡುವುದಾಗಿ ಒಪ್ಪಿ ಕ್ರಯದ ಕರಾರಿನ ಮೊತ್ತದಲ್ಲಿ

೨ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಪಡೆದು ನಿಪಿ.೧ ರಂತೆ ನೊಂದಾಯಿತ ಕ್ರಯದ ಕರಾರು ಪತ್ರವನ್ನು ತಮ್ಮ ಪರ ಬರೆದುಕೊಟ್ಟಿರುತ್ತಾರೆ ಎಂದು ವಾದಿಗಳು ಸಾಬೀತುಪಡಿಸಿರುತ್ತಾರೆ.

೯) ವಾದಿಗಳು ತಮ್ಮ ವಾದಪತ್ರದಲ್ಲಿ ತಾವು ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ಸದಾ ತಯಾರಿ ಹಾಗೂ ಇಚ್ಛೆವುಳ್ಳವರು ಎಂದು ಹೇಳಿರುತ್ತಾರೆ ಮತ್ತು ಅದರಂತೆ ಪಿಡಬ್ಲೂ.೧ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ ಅಲ್ಲದೇ ವಾದಿಗಳು ತಮ್ಮ ವಕೀಲರ ಮೂಲಕ ದಿ.೧೭.೦೫.೨೦೧೪ ರಂದು ಪ್ರತಿವಾದಿಗಳಿಗೆ ನೋಟಿಸ್‌ನ್ನು ನಿಪಿ.೪ ರಂತೆ ನೀಡಿ ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಡಬೇಕು ಎಂದು ಹೇಳಿರುವ ಕಾರಣ ವಾದಿಗಳು ಕ್ರಯದ ಕರಾರಿನ ಭಾಗದಂತೆ ತಾವು ನಡೆದುಕೊಳ್ಳಲು ಸದಾ ತಯಾರಿ ಹಾಗೂ ಇಚ್ಛೆವುಳ್ಳವರು ಎನ್ನುವುದನ್ನು ಸಾಬೀತುಪಡಿಸಿರುತ್ತಾರೆ.

೧೦) ವಾದಿಗಳು ವಾದಪತ್ರದಲ್ಲಿ ಆರೋಪಿಸಿದಂತೆ ಪ್ರತಿವಾದಿಗಳು ದಾವಾ ಮನೆಯನ್ನು ೨ ಲಕ್ಷ ೨೫ ಸಾವಿರ ರೂಪಾಯಿಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ದಿ.೨೫.೦೨.೨೦೧೪ ರಂದು ಕ್ರಯದ ಕರಾರಿನ ಮೊತ್ತದಲ್ಲಿ ಮುಂಗಡವಾಗಿ ೨ ಲಕ್ಷ ರೂಪಾಯಿಗಳನ್ನು ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡು ನಿಪಿ.೧ ರಂತೆ ನೊಂದಾಯಿತ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ ಹಾಗೂ ಉಳಿದ ಕ್ರಯದ ಕರಾರಿನ ಭಾಗದಂತೆ ನೊಂದಾಯಿತ ಕ್ರಯಪತ್ರವನ್ನು ಪ್ರತಿವಾದಿಗಳು ಬರೆದುಕೊಡದ ಕಾರಣ ವಾದಿಗಳು ನಿಪಿ.೪ ರಂತೆ ನೋಟಿಸ್‌ನ್ನು ನೀಡಿ ತಾವು ಕ್ರಯದ ಕರಾರಿನ

ಭಾಗದಂತೆ ನಡೆದುಕೊಳ್ಳಲು ಸದಾ ತಯಾರಿ ಹಾಗೂ ಇಚ್ಛೆವುಳ್ಳವರು ಎನ್ನುವುದನ್ನು ಸಾಬೀತುಪಡಿಸಿರುವ ಕಾರಣ ವಾದಿಗಳು ದಾವೆಯಲ್ಲಿ ಕೇಳಿದಂತೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ನೊಂದಾಯಿತ ಕ್ರಯಪತ್ರವನ್ನು ಮತ್ತು ಪ್ರತಿವಾದಿಗಳಿಂದ ದಾವಾ ಆಸ್ತಿಯ ಸ್ವಾಧೀನತೆಯನ್ನು ಪಡೆಯಲು ತಾವು ಅರ್ಹರು ಎನ್ನುವುದನ್ನು ಸಾಬೀತುಪಡಿಸಿರುವ ಕಾರಣ ಅಂಶ ೧ ರಿಂದ ೩ ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

**೧೧) ಅಂಶ-೪:-** ಈ ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಗಿನಂತೆ ಮಾಡಿದ:

## ಆದೇಶ

ವಾದಿಗಳ ದಾವೆಯನ್ನು ಖರ್ಚು ಸಹಿತ ಡಿಕ್ರಿಗೊಳಿಸಲಾಗಿದೆ.

ಪ್ರತಿವಾದಿಗಳು ದಾವಾ ಆಸ್ತಿ ಮನೆ ಸಂಖ್ಯೆ.೧೭೪/೨೦೮/೧೭೪ ವಿಸ್ತೀರ್ಣ ೨೧X೩೫ ಅಡಿಗೆ ಸಂಬಂಧಿಸಿದಂತೆ ಕ್ರಯದ ಕರಾರಿನ ಉಳಿದ ಮೊತ್ತ 25 ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಈ ಆದೇಶವಾದ ದಿನಾಂಕದಿಂದ 4 ತಿಂಗಳ ಒಳಗಾಗಿ ನೊಂದಾಯಿತ ಕ್ರಯ ಪತ್ರವನ್ನು ವಾದಿಗಳ ಪರ ಬರೆದುಕೊಟ್ಟು ಸ್ವಾಧೀನತೆಯನ್ನು ಕೊಡಬೇಕೆಂದು ನಿರ್ದೇಶಿಸಿ ಆದೇಶಿಸಿದೆ.

ಮೇಲ್ಕಂಡಂತೆ ಡಿಕ್ರಿ ಬರೆಯಲು ಆದೇಶಿಸಿದೆ.

(ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚುಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪ-ದೋಷಗಳನ್ನು ತಿದ್ದಿ ಇಂದು ದಿನಾಂಕ ೧೬ನೇ ಜೂನ್ ೨೦೧೬ ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ವೈಕೆ.ಬೇನಾಳ)
ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಹರಪನಹಳ್ಳಿ

## ಅನುಬಂಧ

೧) ವಾದಿಯರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಃ

ಪಿಡಬ್ಲೂ-೧ಃ ಶ್ರೀ ಕೆ.ಅಸ್ಲಂಬಾಷ ತಂದೆ ಲೇಟ್ ಇಮಾಮ್ ಸಾಹೇಬ್
ಪಿಡಬ್ಲೂ-೨ಃ ಸಿ.ಪೀರ್ ಅಹಮ್ಮದ್ ತಂದೆ ಸಿ.ಕಲೀಲ್ ಅಹಮ್ಮದ್

೨) ವಾದಿಯರ ಪರವಾಗಿ ಗುರ್ತಿಸಲಾದ ದಾಖಲೆಗಳುಃ

| | |
|---|---|
| ನಿಪಿ-೧ | ಃ ಕ್ರಯದ ಕರಾರು ಪತ್ರ |
| ನಿಪಿ-೨ | ಃ ಖಾತಾ ಎಕ್ಸಾಟ್ರ್ಯಕ್ಟ್ |
| ನಿಪಿ-೩ | ಃ ಖಾತಾ ಎಕ್ಸಾಟ್ರ್ಯಕ್ಟ್ |
| ನಿಪಿ-೪ | ಃ ನೋಟಿಸಿನ ಕಛೇರಿ ಪ್ರತಿ |
| ನಿಪಿ-೫ | ಃ ೩ ಅಂಚೆ ರಶೀದಿಗಳು |
| ನಿಪಿ-೬ | ಃ ೨೪-೦೫.೨೦೧೪ರ ಕರಾರು ರದ್ದತಿ |

ಪತ್ರದ ದೃಢೀಕೃತ ನಕಲು

ಇ) ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಃ
ಇಲ್ಲ

ಈ) ಪ್ರತಿವಾದಿಯರ ಪರ ಗುರ್ತಿಸಲಾದ ದಾಖಲೆಗಳುಃ
ಇಲ್ಲ

ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಹರಪನಹಳ್ಳಿ

(Separate order typed and pronounced in the open court)

ಆದೇಶ

ವಾದಿಗಳ ದಾವೆಯನ್ನು ಖರ್ಚು ಸಹಿತ ಡಿಕ್ರಿಗೊಳಿಸಲಾಗಿದೆ.

ಪ್ರತಿವಾದಿಗಳು ದಾವಾ ಆಸ್ತಿ ಮನೆ ಸಂಖ್ಯೆ.೧೭೪/೨೦೮/೧೭೪ ವಿಸ್ತೀರ್ಣ ೨೧X೩೫ ಅಡಿಗೆ ಸಂಬಂಧಿಸಿದಂತೆ ಕ್ರಯದ ಕರಾರಿನ ಉಳಿದ ಮೊತ್ತ 25 ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಈ ಆದೇಶವಾದ ದಿನಾಂಕದಿಂದ 4 ತಿಂಗಳ ಒಳಗಾಗಿ ನೊಂದಾಯಿತ ಕ್ರಯ

ಪತ್ರವನ್ನು ವಾದಿಗಳ ಪರ ಬರೆದುಕೊಟ್ಟು ಸ್ವಾಧೀನತೆಯನ್ನು ಕೊಡಬೇಕೆಂದು ನಿರ್ದೇಶಿಸಿ ಆದೇಶಿಸಿದೆ.

ಮೇಲ್ಕಂಡಂತೆ ಡಿಕ್ರಿ ಬರೆಯಲು ಆದೇಶಿಸಿದೆ.

**(ವೈಕೆ.ಬೇನಾಳ)**
ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಹರಪನಹಳ್ಳಿ